ಸೂಚಿಸಿದಂತೆ ತೋರುತ್ತದೆ. ದೊಡ್ಡ ಹರಿವಾಣದಂತಹ ತಟ್ಟೆಯಲ್ಲಿ ಮಟನ್ ಚಾಪ್ಸ್, ಮಟನ್ ಲಿವರ್, ಫಿಶ್ ಫ್ರೈ, ಚಿಕನ್ ಕಬಾಬ್, ಉಳ್ಳಾಗಡ್ಡಿ, ಸೌತೆಕಾಯಿ, ನಿಂಬೆಹುಳಿಯ ತುಂಡಿನ ಜೊತೆಗೆ ಮುದ್ದೆ ಮುರಿದು ಸಾರಿನಲ್ಲಿ ಅದ್ದಿ ಗಂಟಲಿಗೆ ಇಳಿಸಿದಾಗ ಸಿಗುವ ಮಜವೇ ಬೇರೆ. ವಿಪರ್ಯಾಸವೆಂದರೆ ಹಲಾಲ್ ಮಾಡದಿರುವ ಮಾಂಸ ಎನ್ನುವ ಅಪನಂಬಿಕೆಯಿಂದಲೋ, ಮಿಲಿಟರಿ ಹೋಟೆಲುಗಳಲ್ಲಿ ಹಂದಿ ಮಾಂಸವನ್ನೂ ಮಾಡುತ್ತಾರೆ ಎಂಬ ಗಾಳಿ ಸುದ್ದಿಯಿಂದಲೋ, ಬಾರ್ ಮತ್ತು ವೈನ್ ಶಾಪ್‌ಗಳ ಪಕ್ಕ ಇಂತಹ ಹೋಟೆಲ್‌ಗಳು ಇವೆ ಎಂಬ ಕಾರಣದಿಂದಲೋ, 'ಹಿಂದೂ ಮಿಲಿಟರಿ ಹೋಟೆಲ್' ಎಂಬ ಹೆಸರಿನ ಕಾರಣದಿಂದಲೋ ಬಹುಪಾಲು ಮುಸಲ್ಮಾನರು ಇಂತಹ ಹೋಟೆಲುಗಳಿಗೆ ಹೋಗುವುದಿಲ್ಲ. ಬೀಫ್ ಮಾಡುವ ಮಂಗಳೂರಿನ, ಕೇರಳದ ಹೋಟೆಲ್‌ಗಳಿಗೂ ಧಾರ್ಮಿಕ ಕಾರಣದಿಂದ ಹೇಗೆ ಕೆಲವರು ಹೋಗುವುದಿಲ್ಲವೋ ಅದೇ ಬಗೆಯ ನಿರೂಪಣೆಗಳನ್ನು ಹಿಂದೂ ಮಿಲಿಟರಿ ಹೋಟೆಲಿಗೆ ಬರದಿರುವವರ ಮನಸ್ಥಿತಿಯಾಗಿಯೂ ಪರಾಮರ್ಶಿಸಲು ಸಾಧ್ಯವಿದೆ.

ಇನ್ನು ಊರುಗಳನ್ನು, ಪ್ರದೇಶಗಳನ್ನು ಕೇಂದ್ರೀಕರಿಸಿದ ಹೋಟೆಲ್ಗಳ ಬಗ್ಗೆ ಅವಲೋಕಿಸುವುದಾದರೆ ದೇಶ ವಿದೇಶದಲ್ಲೂ ಪ್ರಸಿದ್ಧವಾಗಿರುವ ಕರ್ನಾಟಕದ ಉಡುಪಿ ಹೋಟೆಲ್, ಮಂಗಳೂರು ಅಥವಾ ಕರಾವಳಿಯ ಮೀನು ಊಟದ ಹೋಟೆಲ್, ದಾವಣಗೆರೆ ಬೆಣ್ಣೆ ದೋಸೆ ಹೋಟೆಲ್, ಉತ್ತರ ಕರ್ನಾಟಕ ಶೈಲಿಯ ಹೋಟೆಲ್, ದಿಂಡಿಗಲ್ ತಲಪಾಕಟ್ಟಿ ಬಿರಿಯಾನಿ, ಹೈದರಾಬಾದಿ ಧಮ್ ಬಿರಿಯಾನಿ, ಕೇರಳದ ತಲಶೇರಿ ಬಿರಿಯಾನಿ ಹೋಟೆಲ್‌ಗಳು ನಮ್ಮ ನಾಲಗೆಯ ಸ್ವಾದವನ್ನು ಹೆಚ್ಚಿಸದೇ ಇರಲಾರದು. ಪ್ರದೇಶದ ಹೆಸರನ್ನೇ ಬ್ರಾಂಡ್ ಆಗಿ ಪರಿವರ್ತಿಸಿ ತಮ್ಮ ಪ್ರದೇಶ ಮಾತ್ರವಲ್ಲದೆ ದೇಶ ವಿದೇಶಗಳಲ್ಲೂ ತಮ್ಮ ಖಾದ್ಯಗಳಿಗೆ ಅಭಿಮಾನಿಗಳನ್ನು ಇಂತಹ ಅನೇಕ ಹೋಟೆಲ್‌ಗಳು ಹೊಂದಿವೆ. ವಿಪರ್ಯಾಸವೆಂದರೆ ಮುಂಬೈನ ಮರಾಠಿಗನೊಬ್ಬ ಉಡುಪಿ ಹೋಟೆಲ್‌ನ ಮಾಲೀಕನಾಗಿಯೋ, ಕರ್ನಾಟಕದ ಕನ್ನಡಿಗನೊಬ್ಬ ಬೆಂಗಳೂರಿನಲ್ಲಿ ಹೈದರಾಬಾದಿ ಧಮ್ ಬಿರಿಯಾನಿಯ, ದಿಂಡಿಗಲ್ ತಲಪಾಕಟ್ಟಿ ಬಿರಿಯಾನಿ ಸೆಂಟರ್‌ನ ಮಾಲೀಕನಾಗಿರುತ್ತಾರೆ. ತಮಿಳುನಾಡಿನ ಶರವಣ ಭವನ, ಆರ್ಯಭವನ ಹೆಸರಿನ ಹೋಟೆಲ್‌ಗಳು ಹೈವೆ ಉದ್ದಕ್ಕೂ, ಬಸ್ಸುನಿಲ್ದಾಣಗಳನ್ನು ವ್ಯಾಪಕವಾಗಿ ಆವರಿಸಿಕೊಂಡ ನೆಲೆ ವಿಶಿಷ್ಟವಾದ್ದಾಗಿದೆ.

ಸರ್ದಾರ್ಜಿ ಜೋಕ್ಸ್‌ಗಳಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಾಂಪನ ಜೋಕ್ಸ್‌ಗಳು ತುಂಬಾ ಪ್ರಚಾರದಲ್ಲಿದ್ದ ಕಾಲವೊಂದಿತ್ತು. ಈ ರಾಂಪ ಯಾರೆಂಬುದನ್ನು ಶೋಧಿಸುತ್ತಾ ಹೋದ ಹಾಗೇ ಅಚ್ಚರಿಯೊಂದು ಕಾದಿತ್ತು. ಈ ಪ್ರಬಂಧದ ವಿಷಯಕ್ಕೂ ರಾಂಪಣ್ಣನಿಗೂ ಅವಿನಾಭಾವ ಸಂಬಂಧವಿದೆ. 1925ರಲ್ಲಿ ಹುಟ್ಟಿದ ರಾಮಪ್ಪಣ್ಣ ಮಂಗಳೂರಿನ ಹೋಟೆಲ್ ಉದ್ಯಮದ ಜೊತೆಯಲ್ಲಿ ರಾಜಕಾರಣಿಯಾಗಿ, ಸಮಾಜಸೇವಕರಾಗಿ ದೊಡ್ಡ ಹೆಸರನ್ನು ಸಂಪಾದಿಸಿದ ವ್ಯಕ್ತಿ. ತಂದೆ ಸೋಮಪ್ಪ ಪೂಜಾರಿಯ ಬಡತನದ ಬದುಕನ್ನು ಕಂಡು ತನ್ನ 14ನೇ ವಯಸ್ಸಿಗೆ ಕದ್ರಿಯ ಹೋಟೆಲ್ ಒಂದರ ಟೇಬಲ್ ಕ್ಲೀನರ್, ಸಪ್ಲೈಯರ್ ಆಗಿ ಕೆಲಸ ಮಾಡಲು ಆರಂಭಿಸಿದವರು ರಾಮಪ್ಪಣ್ಣ. ಅವರ ಪ್ರಾಮಾಣಿಕತೆಯನ್ನು ಕಂಡು ಮಾಲೀಕ ರಾಮಪ್ಪಣ್ಣನಿಗೆ ಹೋಟೆಲ್ ಒಂದನ್ನು ನಡೆಸುವ ಅವಕಾಶ ಕಲ್ಪಿಸಿಕೊಡುತ್ತಾರೆ. ಮುಂದೆ ರಾಮಪ್ಪಣ್ಣ ಕಂಕನಾಡಿಯಲ್ಲಿ ಮತ್ತು ಹಂಪನಕಟ್ಟೆಯಲ್ಲಿ ರಾಜ್‌ಕಮಲ್ ಎಂಬ ಹೋಟೆಲ್‌ಗಳನ್ನು ಸ್ಥಾಪಿಸಿದರು. 80ರ ದಶಕದಲ್ಲಿ ಸಕ್ರಿಯ ಕಾಂಗ್ರೆಸ್ ಕಾರ್ಯಕರ್ತನಾದ ಇವರಿಗೆ ಮಾಜಿ ಮುಖ್ಯಮಂತ್ರಿಗಳಾದ ಎಸ್. ಬಂಗಾರಪ್ಪ, ಹಾಗೂ ಗುಂಡೂರಾವ್ ಅವರು ಅತ್ಯಾಪ್ತರಾಗಿದ್ದರು. ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಕಾರ್ಯಕರ್ತರಿಗೆ ತಮ್ಮ ಹೋಟೆಲ್‌ನಲ್ಲಿ ತಯಾರಿಸಿದ ಮಂಗಳೂರಿಗರ ನೆಚ್ಚಿನ ಗಂಜಿ,

